ದ್ದಾರೆ. ಇನ್ನು ಕೆಲವು ತಾಲ್ಲೂಕುನವರು ಈ ಕೆಲಸವನ್ನು ಜರೂರಾಗಿ ಮಾಡಿದರೆ ನಮ್ಮ ತಾಲ್ಲೂಕಿನಲ್ಲಿ ನೀರಾವರಿಯಾಗುತ್ತದೆ, ಅದನ್ನು ಮಾಡಿಕೊಡಬೇಕೆಂದು ಕೇಳಿದ್ದಾರೆ. ಇಷ್ಟೇ ಅಲ್ಲದೆ ಚಿಕ್ಕಮಂಗಳೂರು ಜಿಲ್ಲೆಯ ರೈತರೂ ಕೂಡ ಕೆಲವು ಪ್ಲಾಂಟೇಷನ್‌ನವರು ಇದರಿಂದ ಅರಣ್ಯ ಸಂಪತ್ತು ಹಾಳಾಗುತ್ತದೆ ಹಾಗೆ ಮಾಡಬೇಡಿ ಎಂದು ವಿರೋಧವನ್ನೂ ಸಹ ಮಾಡಿದ್ದಾರೆ. ಇದರಿಂದ ಇನ್‌ವೆಸ್ಟಿಗೇಟ್ ಮಾಡುವುದಕ್ಕೆ ತೊಂದರೆಯಾಗುತ್ತಾ ಇದೆ. ಮಾನ್ಯ ಸದಸ್ಯರಿಗೆ ಈ ಸಂದರ್ಭದಲ್ಲಿ ತಿಳಿಸುವುದೇನೆಂದರೆ ಆದಷ್ಟು ಶೀಘ್ರವಾಗಿ ಇನ್ನು ೮ ತಿಂಗಳಲಿ ಇದರ ಬಗ್ಗೆ ಪೂರ್ತಿಯಾಗಿ ಇನ್‌ವೆಸ್ಟಿಗೇಟ್ ಮಾಡತಕ್ಕಂಥಾ ಕೆಲಸವನ್ನು ನಾನೇ ಮುಗಿಸಿಕೊಡುತ್ತೇನೆಂದು ಹೇಳುತ್ತೇನೆ

ಶ್ರೀ ಬಿ. ಎ. ಮೊಯಿನುದ್ದೀನ್.—ಅಪ್ಪರ್ ಭದ್ರ ಯೋಜನೆಯಿಂದ ಮಲೆನಾಡು ಪ್ರದೇಶದಲ್ಲಿ ಬಹಳಷ್ಟು ಅರಣ್ಯ, ಕಾಫಿ ಪ್ಲಾಂಟೇಷನ್ ಹೋಗಿ ಎಕಾಲಜಿಕಲ್ ಇಂಬ್ಯಾಲೆನ್ಸ್ ಆಗುತ್ತದೆ ಎನ್ನತಕ್ಕ ಕೂಗೂ ಕೂಡ ಬಂದಿದೆ. ಆದ್ದರಿಂದ ಸರ್ಕಾರದವರು ಈ ಯೋಜನೆಯ ಬಗ್ಗೆ ಪುನಃ ಯೋಜನೆ ಮಾಡತಕ್ಕದ್ದು ಅವಶ್ಯಕ ಇದೆಯೆಂದು ವರದಿ ಇದೆ, ಇದು ನಿಜವೇ ?

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ನಾನು ಮೊದಲೇ ಹೇಳಿದ ಹಾಗೆ ಅರಣ್ಯ ಸಂಪತ್ತು ಪ್ಲಾಂಟೇಷನ್ ಮುಳುಗಡೆಯಾಗುವುದು ನಿಜ. ಮುಳುಗಡೆಯಾಗುತ್ತದೆ, ಇದರ ಬಗ್ಗೆ ಪುನಃ ಯೋಜನೆ ಮಾಡಬೇಕು ಎಂದು ಅಲ್ಲಿಯ ಶಾಸಕರು ಹೇಳುತ್ತಿದ್ದಾರೆ, ಆದರೆ ಚಿತ್ರದುರ್ಗ ತುಮಕೂರು ಜಿಲ್ಲೆಯ ಶಾಸಕರುಗಳು ಈ ಯೋಜನೆಯು ಆಗಬೇಕು ಎಂದು ಕೇಳುತ್ತಿದ್ದಾರೆ. ಇದರ ಬಗ್ಗೆ ನಾವು ಅಂತಿಮ ತೀರ್ಮಾನವನ್ನು ತೆಗೆದುಕೊಳ್ಳುವ ಕಾಲಕ್ಕೆ ತಮ್ಮ ಸಲಹೆಯನ್ನು ಪರಿಶೀಲಿಸಬಹುದು.

ಶ್ರೀ ಕೆ. ದಿವಾಕರ್.—ಈ ಯೋಜನೆಯಲ್ಲಿ ಎಷ್ಟು ಜನ ಇಂಜನಿಯರ್ಸ್ ಕೆಲಸ ಮಾಡುತ್ತಿದ್ದಾರೆ, ಎನ್ನುವುದಕ್ಕೆ ತಾವು ಉತ್ತರ ಹೇಳಲಿಲ್ಲ. ಅಪ್ಪರ್ ಕೃಷ್ಣ ಟ್ರಿಬ್ಯುಟರಿ ಆಗಿರುವುದರಿಂದ ಇಂಟರ್‌ಸ್ಟೇಟ್ ಡಿಸ್ಪ್ಯೂಟ್ ಬಗೆಹರಿಸಿ ಎಷ್ಟು ಟಿ.ಎಂ.ಸಿ. ನೀರನ್ನು ನಮಗೆ ಕೊಡುತ್ತೇವೆಂದು ಹೇಳಿದ್ದಾರೆ, ಅದನ್ನು ತಾವು ಎಲ್ಲೆಲ್ಲಿ ಉಪಯೋಗಿಸಬೇಕು ಎಂದು ತಿಳಿಸುತ್ತೀರಾ ?

ಶ್ರೀ ಬಿ. ಬಿ. ಚಿಮ್ಮನಕಟ್ಟಿ.— ಮಾನ್ಯ ಅಧ್ಯಕ್ಷರೇ, ಈ ಯೋಜನೆಯ ಪ್ರಕಾರ ನಾವು ಸಿದ್ಧಪಡಿಸಿರತಕ್ಕದ್ದು, ನಮಗೆ ೨೦ ಟಿ.ಎಂ.ಸಿ. ನೀರು ಬೇಕು ಎಂದು. ಆದರೆ ಅಲೋಕೇಷನ್ ಆಗಿರುವುದು ಕೇವಲ ೮ ಟಿ.ಎಂ.ಸಿ. ಮಾತ್ರ. ಕೃಷ್ಣ ಟ್ರಿಬ್ಯುನಲ್ ಪ್ರಕಾರ ನಮಗೆ ಎರಡು ರೀತಿಯಲ್ಲಿ ನೀರನ್ನು ಕೊಟ್ಟಿದ್ದಾರೆ. ಒಂದನೆಯದು, ೭೫೪ ಟಿ.ಎಂ.ಸಿ, ಎರಡನೆಯದು, ೧೦೫೦, ಮೊದಲು ನಾವು ೭೫೪ ಟಿ.ಎಂ.ಸಿ ಯನ್ನು ಉಪಯೋಗಿಸಿಕೊಂಡ ನಂತರ ಎರಡನೆಯ ಹಂತಕ್ಕೆ ೧೦೫೦ ಟಿ.ಎಂ.ಸಿ ಯನ್ನು ಕೊಡುವುದೆಂದು ಒಪ್ಪಿಗೆಯಾಗಿದೆ. ಈ ಪ್ರಕಾರ ಈ ಯೋಜನೆಗೆ ೮ ಟಿ.ಎಂಸಿ. ನೀರು ಸಿಕ್ಕುವ ಸಾಧ್ಯತೆ ಇದೆ. ಈ ಯೋಜನೆಗೆ ಬೇಕಾಗಿರತಕ್ಕ ನೀರು ೨೦ ಟಿ.ಎಂ.ಸಿ. ಇದರಿಂದ ೨.೫೦ ಲಕ್ಷ ಎಕರೆ ಸೆಮಿ ಡ್ರೈ ಲ್ಯಾಂಡನ್ನು ನೀರಾವರಿ ಪ್ರದೇಶವನ್ನಾಗಿ ಮಾಡಬೇಕು ಎಂದು ಮಾಡಿದ್ದೇವೆ.

ಶ್ರೀ ಕೆ. ದಿವಾಕರ್ —ನಾನು ಅಲ್ಲಿ ಎಷ್ಟು ಜನ ಇಂಜನಿಯರ್ಸ್ ಕೆಲಸ ಮಾಡುತ್ತಿದ್ದಾರೆಂದು ಕೇಳಿದೆ, ತಾವು ಉತ್ತರ ಹೇಳಲಿಲ್ಲ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ನನ್ನ ಹತ್ತಿರ ಆ ಮಾಹಿತಿ ಇಲ್ಲ.

Shortage of Electricity in the State

869 SRI M. Y. PATIL (Afzalpur).— Will the Minister of State for Power be pleased to state :—

(a) whether it has come to the notice of the Government that the hardship has caused to the ryots frequently due to shortage in supply of electricity.

(b) Is so, whether Government will postpone the recovery of loan and other arrears due by the ryots and for grant of compensation to the effected ryots ?

SRI G. H. ASWATH REDDY (Minister of State for Power).—

(a) The present shortage of electricity in the State is due to reduction in the generation of power than the expected targets. This shortage would be minimised to the possible extent if the efforts of drawing additional power from the neighbouring States of Andra Pradesh and Kerala proved fruitful.

(b) This question does not arise in view of the reply furnished to clause (a) above.

ಶ್ರೀ ಎಂ. ವೈ. ಪಾಟೀಲ್.— ಮಾನ್ಯ ಅಧ್ಯಕ್ಷರೇ ಕರ್ನಾಟಕದಲ್ಲಿ ವಿದ್ಯುಚ್ಛಕ್ತಿಯು ಕೊರತೆ ರೈತರಿಗೆ ಮತ್ತು ಕಾರ್ಖಾನೆದಾರರಿಗೆ ಜಾಸ್ತಿಯಾಗಿ ತೊಂದರೆಯಾಗಿ ಹಾನಿಯುಂಟಾಗಿರುವುದನ್ನು ಮಾನ್ಯ ಮಂತ್ರಿಗಳು ಒಪ್ಪಿಕೊಂಡಿದ್ದಾರೆ. ಆದರೆ ಹಾನಿಗೊಳಗಾದವರಿಗೆ ಪರಿಹಾರದ ಬಗ್ಗೆ ತಾವು ಏನನ್ನೂ ಹೇಳಿಲ್ಲ. ನಾವು ಈ ಮಿನಿಮಂ ಚಾರ್ಜಸ್ ಕಡಿಮೆ ಮಾಡಬೇಕು ಎಂದು ಕೇಳಿಕೊಂಡರೂ ಸಹ ತಾವು ಅದು ಬರುವುದಿಲ್ಲವೆಂದು ಹೇಳಿದ್ದೀರಿ. ವಿದ್ಯುಚ್ಛಕ್ತಿಯ ಕೊರತೆಯಿಂದ ಹಾನಿಯುಂಟಾದವರಿಗೆ ಏನಾದರೂ ರಿಯಾಯಿತಿಯನ್ನು ತಾವು ತೋರಿಸುತ್ತೀರಾ ?

ಶ್ರೀ ಜಿ. ಎಚ್. ಆಶ್ವತ್ಥರೆಡ್ಡಿ.— ನಮ್ಮ ಸರ್ಕಾರದವರು ರೈತರಿಗೆ ಸಾಕಷ್ಟು ಅನುಕೂಲವನ್ನು ಮಾಡಿಕೊಟ್ಟಿದ್ದೇವೆ. ಒಂದು ಹಾರ್ಸ್ ಪವರ್‌ಗೆ ಇದ್ದ ಚಾರ್ಜನ್ನೂ ಸಹ ನಾವು ರಿಯಾಯಿತಿ ಕೊಟ್ಟಿದ್ದೇವೆ. ಪ್ರಪಂಚದಲ್ಲಿ ಎಲ್ಲಿಯೂ ಇಲ್ಲದಷ್ಟು ರಿಯಾಯಿತಿಯನ್ನು ನಮ್ಮ ರೈತರಿಗೆ ಕೊಟ್ಟಿದ್ದೇವೆ. ದೊಡ್ಡ ದೊಡ್ಡ ಉದ್ದಿಮೆದಾರರಿಗೆ ನಮ್ಮ ನಿಯಮಗಳ ಪ್ರಕಾರ ವಿದ್ಯುಚ್ಛಕ್ತಿಯನ್ನು ಕಟ್ ಮಾಡಿದ್ದೇವೆ ಇದರಿಂದ ಅವರಿಗೆ ತೊಂದರೆಯಾಗುತ್ತದೆ, ಪವರ್ ನಮ್ಮಲ್ಲಿ ಕಡಿಮೆಯಾದಾಗ ಈ ರೀತಿಯಾಗಿ ಪವರ್‌ಕಟ್ ಮಾಡಲೇಬೇಕಾಗುತ್ತದೆ. ಆದರೆ ಪವರ್‌ಕಟ್ ಮಾಡಿರುವುದಕ್ಕೆ ಪರಿಹಾರ ಕೊಡಬೇಕು ಎಂದು ಹೇಳಿದರೆ ಅದು ಸಾಧ್ಯವಾಗುವುದಿಲ್ಲ.

ಶ್ರೀ ಎಂ. ವೈ. ಪಾಟೀಲ್.— ಮಿನಿಮಂ ಚಾರ್ಜನ್ನು ತಾವು ಪವರ್ ಸಪ್ಲೈ ಮಾಡಲಿಲ್ಲ ಎಂದರೂ ಕೊಡಬೇಕಾಗುತ್ತದೆ. ಇದು ಸರಿಯೇ ? ಇದರಿಂದ ಹಾನಿಯಾಗಿದೆಯೆಂದು ನಾವು ಪರಿಹಾರ ಕೇಳುತ್ತಿದ್ದೇವೆ.

ಶ್ರೀ ಜಿ. ಎಚ್. ಆಶ್ವಥರೆಡ್ಡಿ.— ರೈತರಿಗೆ ನಾವು ವಿದ್ಯುಚ್ಛಕ್ತಿಯು ತೊಂದರೆ ಮಾಡಿಲ್ಲ. ಕೆಲವು ವೇಳೆ ವಿದ್ಯುಚ್ಛಕ್ತಿ ನಿರಂತರವಾಗಿ ಬರದೆ ಇರಬಹುದು, ಆದರೆ ರೈತರಿಗೆ ಯಾವ ತೊಂದರೆಯನ್ನೂ ನಾವು ಮಾಡಿಲ್ಲ. ಮಿನಿಮಂ ಚಾರ್ಜಸನ್ನು ಎಲ್ಲರೂ ಕೊಡಬೇಕು, ಅದು ಅವರ ಕರ್ತವ್ಯ.

SRI N. B. SARDESAI.— May I know whether the Government are under the impression that drawing additional power from neighbouring States like Andhra Pradesh, Kerala would prove to be a permanent solution to the shortage of electricity in the State ? Could not the Government find out a permanent solution by taking up medium hydel projects and other power projects ?

SRI G. H. ASWATH REDDY.— The Government is not having the intention of alloting more money for purchasing power from other States. We are also thinking of having mini-hydel and major power projects. As you know, in North Kanara we are having Kali Project and Raichur Thermal Power Station project is going on and we have also given permission to start mini-hydel projects.

ಶ್ರೀ ಎ. ಲಕ್ಷ್ಮೀಸಾಗರ್.— ಮಾನ್ಯ ಸದಸ್ಯರಾದ ಪಾಟೀಲರು ಕೇಳಿರುವ ಪ್ರಶ್ನೆ ಗಂಭೀರವಾಗಿದೆ, ವಿದ್ಯುಚ್ಛಕ್ತಿಯ ಸರಬರಾಜು ಇಲ್ಲ, ಆದರೆ ಮಿನಿಮಂ ಚಾರ್ಜಸ್ ವಸೂಲು ಮಾಡು

ತ್ತಿದ್ದಾರೆ. ಇದಕ್ಕೆ ಮಾನ್ಯ ಮಂತ್ರಿಗಳು ಸರಿಯಾದ ಉತ್ತರವನ್ನು ಕೊಡಲಿಲ್ಲ. ಇದರ ಬಗ್ಗೆ ಸರ್ಕಾರದ ನಿರ್ದಿಷ್ಟವಾದ ನಿಲುವು ಏನು ? Minimum charges are payable irrespective of the quantum of consumption of electricity. I understand that. But where there are cases of non supply of electricity over a period of time, is there any justification for the Government to collect the minimum charges ?

ಶ್ರೀ ಜಿ. ಎಚ್. ಅಶ್ವತ್ಥರೆಡ್ಡಿ,— ರೈತರು ನಮಗೆ ವಿದ್ಯುಚ್ಛಕ್ತಿ ಬೇಕಾಗಿಲ್ಲ ಎಂದರೆ ನಾವು ರಿಯಾಯಿತಿಯನ್ನು ಕೊಡುವುದಕ್ಕೆ ಯೋಚನೆ ಮಾಡಬಹುದು. ಬಾಲ್ಕಿ ಮತ್ತು ಗುಲ್ಬರ್ಗ ಕಡೆಗಳಲ್ಲಿ ವಿದ್ಯುಚ್ಛಕ್ತಿಯ ಸರಬರಾಜು ಇರುವುದರಿಂದ ಅವರು ಮಿನಿಮಂ ಚಾರ್ಜಸ್ ಕೊಡಬೇಕಾಗುತ್ತದೆ. ಸರಬರಾಜು ಇರುವಾಗ ರೈತರು ಅದನ್ನು ಉಪಯೋಗ ಮಾಡಿಕೊಳ್ಳಬೇಕು, ಉಪಯೋಗ ಮಾಡಿಕೊಳ್ಳದಿದ್ದರೆ, ನಮಗೆ ವಿದ್ಯುಚ್ಛಕ್ತಿ ಬೇಕಾಗಿಲ್ಲ ಎಂದು ಬರೆದು ತಿಳಿಸಿದರೆ ರಿಯಾಯಿತಿಯನ್ನು ಕೊಡುವುದಕ್ಕೆ ಅನುಕೂಲವಾಗುತ್ತದೆ. ಸುಮ್ಮನೆ ಇದ್ದರೆ ಅವರಿಗೆ ತೊಂದರೆಯಾಗುತ್ತದೆ.

ಶ್ರೀ ಷೇರ್‌ಖಾನ್.— ನಮ್ಮ ಭಾಗದಲ್ಲಿ ರೈತರು ಒಂದೇ ಬೆಳೆಯನ್ನು ತೆಗೆಯುತ್ತಿದ್ದಾರೆ. ವರ್ಷದ ಎಲ್ಲಾ ಭಾಗದಲ್ಲಿ ನಾವು ಕರೆಂಟನ್ನು ಉಪಯೋಗ ಮಾಡುವುದಿಲ್ಲ. ಆದರೂ ಸಹ ನಾವು ಮಿನಿಮಂ ಚಾರ್ಜನ್ನು ಕೊಡಬೇಕಾಗಿರುತ್ತದೆ. ಟ್ರಾನ್ಸ್‌ಪೋರ್ಟ್ ಡಿಪಾರ್ಟ್‌ಮೆಂಟಿನಲ್ಲಿ ಲಾರಿಗಳು ನಡೆಯುತ್ತಿಲ್ಲ ಎಂದರೆ ಹೇಗೆ ಟ್ಯಾಕ್ಸನ್ನು ಕಲೆಕ್ಟ್ ಮಾಡುವುದಿಲ್ಲವೋ ಹಾಗೆ ಪಂಪ್ ಚಾಲೂ ಇಲ್ಲದಿದ್ದರೆ ಮಿನಿಮಂ ಚಾರ್ಜನ್ನು ಬಿಟ್ಟು ಬಿಡುತ್ತೀರಾ ?

ಶ್ರೀ ಜಿ. ಎಚ್. ಅಶ್ವತ್ಥರೆಡ್ಡಿ.— ನಮ್ಮಲ್ಲಿ ಇದರ ಬಗ್ಗೆ ನಿಯಮಗಳು ಇವೆ, ಅದರ ಪ್ರಕಾರ ರಿಯಾಯಿತಿಯನ್ನು ಕೊಡಬೇಕೋ ಬಿಡಬೇಕೋ ಎಂದು ಆಲೋಚನೆ ಮಾಡಿ ಮಾಡುತ್ತೇವೆ. ರೈತರಿಗೆ ತೊಂದರೆ ಮಾಡಬೇಕು ಎನ್ನುವ ಉದ್ದೇಶ ಸರ್ಕಾರಕ್ಕೆ ಇಲ್ಲ. ನಮ್ಮ ಬೋರ್ಡಿಗೂ ಸಹ ಇಲ್ಲ.

ಶ್ರೀ ಎಂ. ಷೇರ್‌ಖಾನ್.— ಟ್ರಾನ್ಸ್‌ಪೋರ್ಟ್ ಡಿಪಾರ್ಟ್‌ಮೆಂಟಿನಲ್ಲಿ ಲಾರಿ ನಡೆಯುತ್ತಿಲ್ಲ ವೆಂದರೆ ಟ್ಯಾಕ್ಸನ್ನು ಕಲೆಕ್ಟ್ ಮಾಡುವುದಿಲ್ಲ. ರೈತರು ನಾವು ಬೆಳೆಯನ್ನು ಬೆಳೆದಿಲ್ಲ, ನಮ್ಮ ಪಂಪನ್ನು ಚಾಲು ಮಾಡಿಲ್ಲವೆಂದರೆ ಮಿನಿಮಂ ಚಾರ್ಜನ್ನು ತೆಗೆದುಕೊಳ್ಳಬಾರದು, ಇದರ ಬಗ್ಗೆ ತಾವು ಸರಿಯಾದ ನಿರ್ಣಯವನ್ನು ಹೇಳುತ್ತೀರಾ ?

ಶ್ರೀ ಜಿ. ಎಚ್. ಅಶ್ವತ್ಥರೆಡ್ಡಿ — ಮಾನ್ಯ ಅಧ್ಯಕ್ಷರೇ, ನಮ್ಮ ಸದಸ್ಯರು ಒಂದು ಮುಖ್ಯವಾದ ವಿಷಯವನ್ನು ತಿಳಿಯಬೇಕು. ನಮ್ಮ ರೈತರಿಗೆ ವಿದ್ಯುಚ್ಛಕ್ತಿಯನ್ನು ಕೊಡಬೇಕು ಎಂದು ನಾವು ೩೦ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಲೈನನ್ನು ಹಾಕಬೇಕಾಗಿರುತ್ತದೆ. ಆದರೆ ಅದರಿಂದ ಬರತಕ್ಕ ಆದಾಯ ಬಹಳ ಕಡಿಮೆ ಎನ್ನುವುದನ್ನೂ ಸಹ ತಾವು ಒಪ್ಪುತ್ತೀರಿ. ಲೈನ್ ಹಾಕಿದ ಐದು ವರ್ಷದವರೆಗೆ ನಾವು ವಿದ್ಯುಚ್ಛಕ್ತಿಯನ್ನು ಕೊಟ್ಟಮೇಲೆ, ಅವರು ವಿದ್ಯುಚ್ಛಕ್ತಿಯನ್ನು ಉಪಯೋಗಿಸಿ ಕೊಳ್ಳಲಿ ಬಿಡಲಿ, ಮಿನಿಮಂ ಚಾರ್ಜಸನ್ನು ಕೊಡಲೇಬೇಕಾಗುತ್ತದೆ. ಆದ್ದರಿಂದ ಮಾನ್ಯ ಸದಸ್ಯರು ಕೇಳುವ ರೀತಿಯಲ್ಲಿ ರಿಯಾಯಿತಿಯನ್ನು ಕೊಡುವುದಕ್ಕಾಗುವುದಿಲ್ಲ.

ಶ್ರೀ ಡಿ. ಟಿ. ಮಾಯಣ್ಣ.— ಕೆಲವು ರೈತರು ಪಂಪ್‌ಸೆಟ್ಟುಗಳನ್ನು ಹಾಕುವುದಕ್ಕೆ ಬ್ಯಾಂಕು ಗಳಲ್ಲಿ ಸಾಲ ತೆಗೆದುಕೊಂಡು ವಿದ್ಯುಚ್ಛಕ್ತಿಯನ್ನು ಕೇಳಿದಾಗ ನಮ್ಮಲ್ಲಿ ರಾ ಮೆಟೀರಿಯಲ್ಸ್ ಇಲ್ಲ ಎಂದು ವರ್ಷಾನುಗಟ್ಟಲೆ ವಿದ್ಯುಚ್ಛಕ್ತಿಯನ್ನು ಕೊಡದೆ, ರೈತರು ಬ್ಯಾಂಕುಗಳಿಗೆ ಬಡ್ಡಿಯನ್ನು ಕಟ್ಟತಕ್ಕ ಪರಿಸ್ಥಿತಿಗೆ ಯಾರು ಹೊಣೆ ? ತಾವು ವಿದ್ಯುಚ್ಛಕ್ತಿಯನ್ನು ಕೊಡುವವರೆಗೂ ಬ್ಯಾಂಕುಗಳವರು ಬಡ್ಡಿಯನ್ನು ತೆಗೆದುಕೊಳ್ಳುವ ರೀತಿಯಲ್ಲಿ, ಹಾಕಿದ ಬಡ್ಡಿಯನ್ನು ಮನ್ನಾ ಮಾಡುವಂತೆ ಬ್ಯಾಂಕಂಗಳ ವರಿಗೆ ತಾವು ಡೈರೆಕ್ಷನ್ ಕೊಡುತ್ತೀರಾ ?

ಶ್ರೀ ಜಿ. ಎಚ್. ಅಶ್ವತ್ಥರೆಡ್ಡಿ.— ಈ ತರಹ ಸಾಲ ತೆಗೆದುಕೊಂಡು ವಿದ್ಯುಚ್ಛಕ್ತಿಯನ್ನು ಕೊಡುವುದು ತಡವಾಗಿರುವಂಥ ನಿದರ್ಶನಗಳು ಇದ್ದರೆ ಮಾನ್ಯ ಸದಸ್ಯರುಗಳು ತಿಳಿಸಿದರೆ ನಾವು ಅದಕ್ಕೆ ಬಹಳ ಆದ್ಯತೆ ಕೊಟ್ಟು ಪರಿಶೀಲನೆ ಮಾಡಿ ಆದಷ್ಟು ಜಾಗ್ರತೆ ವಿದ್ಯುಚ್ಛಕ್ತಿಯನ್ನು ಕೊಡುತ್ತೇವೆ. ಮಾನ್ಯ ಸದಸ್ಯರು ಇಂಥ ನಿದರ್ಶನವನ್ನು ಹೇಳಿದರೆ ತಕ್ಷಣ ಕರೆಂಟ್ ಕೊಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಎಂ. ಷೇರ್‌ಖಾನ್. —ಸ್ವಾಮಿ, ನಾನು ಹೇಳಿದ್ದು ನಿಮಗೆ ಅರ್ಥವಾಗಲಿಲ್ಲ. ನೀವು ಏನು ರಿಯಾಯಿತಿ ಕೊಟ್ಟರೂ ಅದನ್ನು ೫ ವರ್ಷದ ತನಕ ಕಂಟಿನ್ಯೂ ಮಾಡಬೇಕು ಎಂದು ಹೇಳಿದ್ದೇನೆ. ನಮ್ಮ ಕಡೆ ಎಲ್ಲಾ ಒಂದೇ ಬೆಳೆ ತೆಗೆದುಕೊಂಡಿದ್ದಾರೆ. ಎಲೆಕ್ಟ್ರಿಸಿಟಿ ಇಲ್ಲದೇ ಇದ್ದರೆ ಅವರು ಕೃಷಿ ಮಾಡುವ ಹಾಗೆ ಇಲ್ಲ. ಅವರಿಗೆ ಎಲೆಕ್ಟ್ರಿಸಿಟಿ ಡಿಸ್‌ಕನೆಕ್ಟ್ ಮಾಡಿದರೆ ತುಂಬಾ ತೊಂದರೆಯಾಗುತ್ತದೆ. ನಿಮ್ಮ ಕಡೆ ಆದರೆ ಮೂರು ಬೆಳೆ ತೆಗೆದುಕೊಳ್ಳುತ್ತಾರೆ. ಅಲ್ಲಿ ಸ್ವಲ್ಪ ಡಿಸ್‌ಕನೆಕ್ಟ್ ಮಾಡಿದರೂ ಪರವಾಗಿಲ್ಲ. ಅಲ್ಲಿ ಅವರಿಗೆ ಏನು ಫೆಸಿಲಿಟೀಸ್ ಕೊಡುತ್ತಿದ್ದೀರಿ ಅದೇ ಫೆಸಿಲಿಟೀಸ್ ನಮ್ಮ ಕಡೆಯ ರೈತರಿಗೂ ಕೊಡಿ ಎಂದು ಕೇಳುತ್ತೇನೆ.

ಶ್ರೀ ಜಿ. ಹೆಚ್. ಅಶ್ವತ್ಥರೆಡ್ಡಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಷೇರ್‌ಖಾನ್‌ರವರು ಹೇಳಿದಹಾಗೆ ಪ್ರತಿಯೊಬ್ಬರಿಗೂ ಆ ಒಂದು ರಿಯಾಯಿತಿಯನ್ನು ಕೊಡಂವುದಕ್ಕಾಗುವುದಿಲ್ಲ.

ಶ್ರೀ ಪಿ. ರಾಮದೇವ್. —ಸ್ವಾಮಿ, ರಾಜ್ಯದಲ್ಲಿ ವಿದ್ಯುಚ್ಛಕ್ತಿ ಕೊರತೆ ಇರತಕ್ಕಂಥಾದ್ದು ತಮಗೆ ಗೊತ್ತಿದೆ. ನೆರೆಯ ರಾಜ್ಯಗಳವರಾದ ಆಂಧ್ರ ಮತ್ತು ಕೇರಳದವರು ಸರ್ಪ್ಲಸ್ ಪವರನ್ನು ಈ ಆಟೋಮಿಂಕ್ ರಿಯಾಕ್ಟರ್ ವ್ಯವಸ್ಥೆಯಿಂದ ತೆಗೆಬುಕೊಳ್ಳುತ್ತಿದ್ದಾರೆ. ನಮ್ಮ ರಾಜ್ಯದಲ್ಲಿ ಇರತಕ್ಕಂಥ ಈ ಒಂದು ಕೊರತೆಯನ್ನು ನೀಗಿಸುವುದಕ್ಕೆ ಸರ್ಕಾರದವರು ಏನು ಪ್ರಯತ್ನ ಮಾಡಿದ್ದಾರೆ ಎಂದು ಕೇಳುತ್ತೇನೆ.

ಉಪಾಧ್ಯಕ್ಷರು.—ಅವರು ಇದಕ್ಕೆ ಈಗಾಗಲೇ ಉತ್ತರವನ್ನು ಕೊಟ್ಟಿದ್ದಾರೆ.

ಶ್ರೀ ಜಿ. ಹೆಚ್. ಅಶ್ವತ್ಥರೆಡ್ಡಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ರಾಮದೇವ್‌ರವರಿಗೆ ಗೊತ್ತಿರಬಹುದು, ಈ ಕಾಳಿ ಪ್ರಾಜೆಕ್ಟ್‌ನಲ್ಲಿ ಈಗಾಗಲೇ ೪ ಯೂನಿಟ್‌ಗಳು ಕೆಲಸ ಮಾಡುತ್ತಿವೆ. ಇದರಿಂದ ೧೩೫ ಮೆಗಾವಾಟ್ ವಿದ್ಯುಚ್ಛಕ್ತಿ ನಮಗೆ ಸಿಕ್ಕುತ್ತಾ ಇದೆ. ಈ ರಾಯಚೂರು ಥರ್ಮಲ್ ಪ್ರಾಜೆಕ್ಟ್ ೧೯೮೪ರ ಹೊತ್ತಿಗೆ ಸಿದ್ಧವಾಗುತ್ತದೆ. ಕೇಂದ್ರದವರು ಮಿನಿ ಹೈಡ್ರೋ ಎಲೆಕ್ಟ್ರಿಕಲ್ ಪ್ರಾಜೆಕ್ಟ್‌ಗೆ ಪರ್ಮಿಷನ್ ಕೊಟ್ಟಿದ್ದಾರೆ. ಅದು ಮಲೆನಾಡಿನಲ್ಲಿದೆ. ಈ ಆಟಾಮಿಕ್ ರಿಯಾಕ್ಟರ್‌ನಿಂದ ಬಹಳ ಕಡಿಮೆ ವೆಚ್ಚದಲ್ಲಿ ವಿದ್ಯುಚ್ಛಕ್ತಿಯನ್ನು ಉತ್ಪಾದನೆ ಮಾಡಬಹುದು. ಕೇಂದ್ರದವರು ಈ ಆಟಾಮಿಕ್ ರಿಯಾಕ್ಟರ್ ವ್ಯವಸ್ಥೆಗೆ ಅನುಮತಿ ಕೊಟ್ಟರೆ ನಮಗೆ ಸಂತೋಷ. ಈ ಬಗ್ಗೆ ನಾವು ಕೇಂದ್ರ ಸರ್ಕಾರದವರನ್ನು ಕೇಳಿದ್ದೇವೆ. ಈಗ ನಾವು ಹೆಚ್ಚಿನ ಅಧ್ಯತೆಯನ್ನು ಈ ಕಾಳಿ ಪ್ರಾಜೆಕ್ಟ್‌ಗೆ ಕೊಡುತ್ತಿದ್ದೇವೆ. ಈ ಬೇಡ್ತಿ ಪ್ರಾಜೆಕ್ಟ್ ಬಗ್ಗೆ ಕೂಡ ನಾವು ಕೇಂದ್ರದವರನ್ನು ಕೇಳುತ್ತಿದ್ದೇವೆ. ಇದೆಲ್ಲಾ ನಮ್ಮ ಕೈಗೆ ಬಂದರೆ ರಾಜ್ಯದಲ್ಲಿ ವಿದ್ಯುಚ್ಛಕ್ತಿ ಕೊರತೆ ಅಷ್ಟು ಇರುವುದಿಲ್ಲ.

ಶ್ರೀ ಬಿ ಎ. ಮೊಹಿದ್ದೀನ್.—ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ವಿದ್ಯುಚ್ಛಕ್ತಿ ಉತ್ಪಾದನೆಯ ದೃಷ್ಟಿಯಿಂದ ಈ ಬೇಡ್ತಿ ಯೋಜನೆ ಬಹಳ ಪ್ರಾಮುಖ್ಯವಾದ ಯೋಜನೆಯಾಗಿದೆ. ಇದರ ಬಗ್ಗೆ ಸರ್ಕಾರದವರ ಸ್ಪಷ್ಟ ನಿಲುವು ಏನು ? ಈ ಬಗ್ಗೆ ಒಂದು ಕಮಿಷನ್ ಅಪಾಯಿಂಟ್ ಮಾಡಿದ್ದಾರೆ ಎಂದು ಕಾಣುತ್ತದೆ. ಅವರ ಒಂದು ರಿಪೋರ್ಟ್ ಯಾವ ಹಂತಕ್ಕೆ ಬಂದಿದೆ ? ಈ ಬೇಡ್ತಿ ಯೋಜನೆಯನ್ನು ಕಾರ್ಯರೂಪಕ್ಕೆ ತರುತ್ತೀರಾ ಅಥವಾ ಅದನ್ನು ಕೈಬಿಡುತ್ತೀರಾ ಎಂಬುದನ್ನು ತಿಳಿಸಬೇಕು.

ಶ್ರೀ ಜಿ.ಹೆಚ್. ಅಶ್ವತ್ಥರೆಡ್ಡಿ.—ಈ ಬಗ್ಗೆ ನಾನು ಒಂದು ಕಮಿಷನ್ ಅಪಾಯಿಂಟ್ ಮಾಡಿದ್ದೇವೆ. ಅದರ ಅಧ್ಯಕ್ಷರಾದ ಶ್ರೀ ನಾರಾಯಣರಾವ್‌ರವರು ಬಹಳ ಬುದ್ಧಿವಂತರು ; ಈ ವಿಚಾರದಲ್ಲಿ ಬಹಳ ಪರಿಜ್ಞಾನ ಉಳ್ಳಂತಹವರು. ಅವರು ಆ ಬಗ್ಗೆ ಒಂದು ರಿಪೋರ್ಟನ್ನು ಸಬ್ಮಿಟ್ ಮಾಡಬೇಕಾಗಿದೆ. ಅವರು ಇನ್ನು ನಮಗೆ ರಿಪೋರ್ಟ್ ಕೊಟ್ಟಿಲ್ಲ. ಅವರಿಂದ ನಮಗೆ ವರದಿ ಬಂದನಂತರ ನಾವು ಪರಿಶೀಲಿಸುತ್ತೇವೆ. ಈ ಬೇಡ್ತಿ ಯೋಜನೆಯಿಂದ ಸಹ ನಮಗೆ ಅನುಕೂಲವಾಗುತ್ತದೆ ಎಂಬುದು ನಮಗೂ ಗೊತ್ತಿದೆ.

ಶ್ರೀ ಎಂ. ವೈ. ಪಾಟೀಲ್.—ಮಾನ್ಯ ಅಧ್ಯಕ್ಷರೇ, ಈ ವಿದ್ಯುಚ್ಛಕ್ತಿ ಸರಬರಾಜಿನ ಮೇಲಿನ ಮಿನಿಮಂ ಚಾರ್ಜಿಸ್ ಇನ್ನು ೫ ವರ್ಷಗಳ ಕಾಲ ಹೆಚ್ಚುವುದಿಲ್ಲ ಎಂದ ಮಾನ್ಯ ಮಂತ್ರಿಯವರು ಹೇಳಿದರು. ಈ ೫ ವರ್ಷಗಳ ಮಟ್ಟಿಗಾದರೂ ಅದು ರೈತರ ಮೇಲೆ ಹೆಚ್ಚಾಗದಂತೆ, ಅದು ಹಾಗೆಯೇ ಕಂಟಿನ್ಯೂ ಆಗಬೇಕು ಎಂದು ಹೇಳುತ್ತೇನೆ. ಈ ಆಂಧ್ರಪ್ರದೇಶ ಮತ್ತು ಕೇರಳದಿಂದ ನಾವು ಹೆಚ್ಚು ವಿದ್ಯುಚ್ಛಕ್ತಿಯನ್ನು ತೆಗೆದುಕೊಳ್ಳುವ ವಿಚಾರದಲ್ಲಿದ್ದೇವೆ ಎಂದು ಮಾನ್ಯ ಮಂತ್ರಿಯವರು ಹೇಳಿದರು. ಅವರು ಹೆಚ್ಚು ವಿದ್ಯುಚ್ಛಕ್ತಿಯನ್ನು ತೆಗೆದುಕೊಂಡಿದ್ದಾರೆಯೋ ಅಥವಾ ಇಲ್ಲವೋ ಎನ್ನುವುದನ್ನು ಅವರು

ಖಚಿತವಾಗಿ ಹೇಳಲಿಲ್ಲ. ಇದಲ್ಲದೇ ಕರ್ನಾಟಕದಲ್ಲಿ ಇನ್ನೂ ಕೆಲವು ಪ್ರಾಜೆಕ್ಟ್‌ಗಳನ್ನು ಪ್ರಾರಂಭ ಮಾಡುತ್ತೇವೆ ಎನ್ನುತಕ್ಕಂಥ ಮಾತನ್ನು ಹೇಳಿದ್ದಾರೆ. ಆ ಪ್ರಾಜೆಕ್ಟ್‌ಗಳೆಲ್ಲಾ ಪ್ರಾರಂಭವಾದರೆ ರೈತರ ಬೇಡಿಕೆಗಳು ಏನಿದೆ ಅದರ ಪ್ರಕಾರ ವಿದ್ಯುಚ್ಛಕ್ತಿ ಕೊರತೆಯೆಲ್ಲಾ ಸರಿಯೋಗುತ್ತದೆಯೇ ಎಂದು ಕೇಳುತ್ತಿದ್ದೇನೆ.

ಶ್ರೀ ಜಿ. ಹೆಚ್. ಅಶ್ವತ್ಥರೆಡ್ಡಿ.—ಮಾನ್ಯ ಅಧ್ಯಕ್ಷರೇ, ನಾವು ನಮ್ಮ ರಾಜ್ಯದಲ್ಲಿ ಎಷ್ಟೇ ವಿದ್ಯುಚ್ಛಕ್ತಿಯನ್ನು ಉತ್ಪಾದನೆ ಮಾಡಿದರೂ ಕೂಡ ಯಾವಾಗಲೂ ಅದರ ಬೇಡಿಕೆ ಇದ್ದೇ ಇರುತ್ತದೆ. ನಮ್ಮ ಬೇಡಿಕೆಗಳ ಪ್ರಕಾರ ಹೆಚ್ಚು ಹೆಚ್ಚು ವಿದ್ಯುಚ್ಛಕ್ತಿಯನ್ನು ಪ್ರೊಡ್ಯೂಸ್ ಮಾಡಿದರೆ ಒನೇ ಆಫ್‌ವಾ ಔನೇ ಪ್ಲಾನ್‌ನಲ್ಲಿ ನಮಗೆ ಬೇಡಿಕೆಗಳೆಲ್ಲವೂ ಪೂರ್ಣಗೊಗಬಹುದು. ನಮಗೆ ಪ್ರತಿವರ್ಷ ಎಷ್ಟು ವಿದ್ಯುಚ್ಛಕ್ತಿ ಬೇಕಾಗುತ್ತದೆ ಎಂದರೆ ೧೦೫೦ ಮೆಗವಾಟ್‌ಗಳಿಂದ ೨೦೨೦ ಮೆಗವಾಟ್‌ಗಳಷ್ಟು ಬೇಕಾಗುತ್ತದೆ. ನಾವು ವಿದ್ಯುಚ್ಛಕ್ತಿಯನ್ನು ಉತ್ಪತ್ತಿ ಮಾಡುತ್ತಾ ಇರಬೇಕು. ಹಾಗೆ ಉತ್ಪತ್ತಿ ಮಾಡಿದ್ದನ್ನು ತಡೆದು ಹಿಡಿದಿಟ್ಟುಕೊಳ್ಳುವುದಕ್ಕೆ ಆಗುವುದಿಲ್ಲ. ಆದನ್ನು ಸರಬರಾಜು ಮಾಡುತ್ತಾ ಇರಬೇಕು. ನಮ್ಮ ಮಾನ್ಯ ಸದಸ್ಯರು ಆಗಲೇ, ನೆರೆಯ ರಾಜ್ಯಗಳಿಂದ ವಿದ್ಯುಚ್ಛಕ್ತಿಯನ್ನು ತರಿಸಿಕೊಂಡಿದ್ದಾರೆಯೋ ಅಥವಾ ಇಲ್ಲವೋ ಎನ್ನುವ ಮಾತನ್ನು ಹೇಳಿದ್ದಾರೆ. ನಾನು ಈ ಸದನದಲ್ಲಿ ನಾಲ್ಕೈದು ಬಾರಿ ಆ ವಿಚಾರದಲ್ಲಿ ಹೇಳಿದ್ದೇನೆ ; ಆಂಧ್ರ, ಕೇರಳ ಮತ್ತು ಮಹಾರಾಷ್ಟ್ರದವರು ನಮಗೆ ವಿದ್ಯುಚ್ಛಕ್ತಿಯನ್ನು ಕೊಡುತ್ತಿದ್ದಾರೆ. ಕೇರಳದಿಂದ ನಮಗೆ ಹೆಚ್ಚಿನ ವಿದ್ಯುಚ್ಛಕ್ತಿ ಬರುತ್ತಾ ಇದೆ.

MR. DEPUTY SPEAKER.—Question No. 561 is held over.

D.P.A.P. Programme in Dharwar District

983 SRI M. M. MALAGI (Byadagi) and SRI M. S. KATAGI (Kundgol)—Will the Minister for Rural Development and Panchayat Raj be pleased to state.—

(a) the names of the taluks included under the D.P.A.P. in Dharwar district ;

(b) the number of taluks which were not included under the D.P.A.P. ;

(c) whether Ranibennur and Haveri taluks have been included under the D.P.A.P. If so, the reasons for not including the Byadagi taluk which is more backward than the other two taluks ;

(d) whether the Government would give an assurance for inclusive of Byadagi taluk atleast now in the D.P.A.P. Scheme from tne year 1981-82 ?

SRI B. RAMAIAH.(Minister for Rural Development and Panchayat Raj).—

(a) (1) Haveri, (2) Kundgol, (3) Mundargi, (4) Ranibennur and (5) Ron taluks were included under D.P.A.P. Scheme aided by the Central Government and (1) Naragund (2) Sirahatti taluks were included under the State D.P.A.P. Scheme aided by the State Government.

(b) 10.